ಅಷ್ಟೇ ಸಾಕೇ ಯೋಚಿಸಿ ಹೇಳು; ಬೇಡವೇನು ಕಾಳು?

ಬೇಕಾದ್ದೇನು ಬದುಕೋದಕ್ಕೆ?
"ಅಮ್ಮನ ಪ್ರೀತಿಯ ತೆಕ್ಕೆ!"
ಅಷ್ಟೇ ಸಾಕೇ ಬೇಡವೆ ಹೇಳು; ನಿನ್ನದೆ ಸ್ವಂತ ಬಾಳು!?

ಈ ಪದ್ಯದಲ್ಲಿ ಹಾರುವುದಕ್ಕೆ ರೆಕ್ಕೆ ಇದ್ದರೆ ಮಾತ್ರ ಸಾಲದು, ಹಾರಲಿಕ್ಕೆ ಬಯಲೂ ಬೇಕು ಎನ್ನುವ ಸಂಬಂಧೀತತ್ವವನ್ನು ಮಕ್ಕಳಿಗೆ ಅವರ ಭಾಷಾಕಲ್ಪದಲ್ಲೇ ದಾಟಿಸುವ ಪ್ರಯತ್ನವಿದೆ. ಮುಂದೆ 'ಚಿನ್ನಾರಿ ಮುತ್ತ' ಚಿತ್ರಕ್ಕೆ ಹಾಡುಬರೆಯುವಾಗ ಈ ಐಡಿಯಾವನ್ನ ಇನ್ನಷ್ಟು ಸರಳೀಕರಿಸಿ 'ರೆಕ್ಕೆ ಇದ್ದರೆ ಸಾಕೇ' ಎನ್ನುವ ಹಾಡನ್ನು ಬರೆದದ್ದಾಯಿತು. ಅದು ಈವತ್ತೂ ಕನ್ನಡ ಮಕ್ಕಳಿಗೆ ಪ್ರಿಯವಾದ ಒಂದು ಗೀತೆಯಾಗಿದೆ.

ಮಕ್ಕಳ ಕವಿತೆಗಳು ಎಂತೆಂಥಾ ಕಠೋರ ಸತ್ಯಗಳನ್ನು ತಮ್ಮ ಹೃದಯದಲ್ಲಿ ಬಚ್ಚಿಟ್ಟುಕೊಂಡಿರುತ್ತವೆ ಎನ್ನುವುದಕ್ಕೆ ಬ್ರೌನಿಂಗ್ ಕವಿಯ 'ಪೈಡ್ ಪೈಪರ್ ಆಫ್ ಹ್ಯಾಮಲಿನ್' ಎಂಬ ಪ್ರಸಿದ್ಧ ಕವಿತೆಯನ್ನು ಗಮನಿಸಬೇಕು. ಕುವೆಂಪು ಅವರ 'ಕಿಂದರಿಜೋಗಿ' ಕವಿತೆಗೆ ಪ್ರೇರಣೆ ಈ ಇಂಗ್ಲಿಷ್ ಕವನ. ಅಮೆರಿಕಾದ ಪೆನ್ಸಿಲ್ವೇನಿಯಾದಲ್ಲಿ ನೆಲೆಸಿರುವ ಎಚ್.ವೈ. ರಾಜಗೋಪಾಲ್ ಅವರು 'ಬೊಮ್ಮನಹಳ್ಳಿಯ ಕಿಂದರಿಜೋಗಿ'ಯ ಬಗ್ಗೆ ಬರೆಯುವಾಗ ಬ್ರೌನಿಂಗ್ ಕವಿಯ ಕವಿತೆಯ ಹಿನ್ನೆಲೆಯಲ್ಲಿರುವ ದಾರುಣ ದುರಂತಕಥೆಯೊಂದನ್ನು ಪ್ರಸ್ತಾಪಿಸುತ್ತಾರೆ. ಪೈಡ್ ಪೈಪರ್ ಕವಿತೆಯ ಹಿಂದೆ ಮಧ್ಯಕಾಲೀನ ಯುಗದಲ್ಲಿ ಸಂಭವಿಸಿದ ಮಕ್ಕಳ ಧರ್ಮಯುದ್ಧದ (ಕ್ರುಸೇಡ್ಸ್) ಐತಿಹ್ಯವಿದೆ. ಪಶ್ಚಿಮ ಯೂರೋಪಿನ ಕ್ರೈಸ್ತರು, ತಮ್ಮ ಧರ್ಮದ ಪವಿತ್ರನಗರವೆಂದು ಪರಿಗಣಿಸಲ್ಪಟ್ಟಿರುವ ಜೆರುಸಲೇಂ ನಗರವನ್ನು ಅನ್ಯಧರ್ಮೀಯರಿಂದ ಮುಕ್ತಗೊಳಿಸಲು ಎಂಟು ಬಾರಿ ಸೈನಿಕ ಕಾರ್ಯಾಚರಣೆಗಳನ್ನು ನಡೆಸುತ್ತಾರೆ. ಇವನ್ನೇ ಕ್ರುಸೇಡ್‌ಗಳೆಂದು ಗುರುತಿಸುವುದು. ಹದಿಮೂರನೇ ಶತಮಾನದಲ್ಲಿ ದಾರುಣವಾದ ಮಕ್ಕಳ ಕ್ರುಸೇಡ್‌ಗಳು ನಡೆಯುತ್ತವೆ. ಸ್ಟೀಫನ್ ಎಂಬ ಕುರುಬ ಹುಡುಗನ ಮುಂದಾಳುತನದಲ್ಲಿ ಹನ್ನೆರಡು ವಯಸ್ಸು ಮೀರದ ಮೂವತ್ತು ಸಾವಿರ ಮಕ್ಕಳ ದಂಡೊಂದು ಜೆರುಸಲೇಂ ಅನ್ನು ಅನ್ಯಧರ್ಮೀಯರಿಂದ ಮುಕ್ತಗೊಳಿಸಲು ದಂಡಯಾತ್ರೆ ಹೊರಡುತ್ತದೆ. ದಾರಿಯಲ್ಲಿ ಅನೇಕ ಅವಘಡಗಳು ಸಂಭವಿಸುತ್ತವೆ. ಸಮುದ್ರದಲ್ಲಿ ಹಡಗು ಒಡೆದು ಸಾವಿರಾರು ಮಕ್ಕಳು ಮೃತರಾಗುತ್ತಾರೆ. ಅಳಿದುಳಿದ ಮಕ್ಕಳು ಗುಲಾಮರಾಗಿ ಮಾರಲ್ಪಡುತ್ತಾರೆ. ಇಂಥದೇ ಇನ್ನೊಂದು ದುರಂತ ಘಟನೆ – ನಿಕೊಲಾಸ್ ಎಂಬ ಜರ್ಮನ್ ಹುಡುಗನ ನೇತೃತ್ವದಲ್ಲಿ ಇಪ್ಪತ್ತು ಸಾವಿರ ಮಂದಿ ಮಕ್ಕಳು ಜೆರುಸಲೆಂ ಕಡೆ ಹೊರಟು ಮೊದಲ ಚಿಲ್ಡ್ರನ್ ಕ್ರುಸೇಡಿನಂತೆಯೇ ಮಾರ್ಗಮಧ್ಯದಲ್ಲಿ ನಾನಾಬಗೆಯ ತೊಂದರೆಗೆ ಸಿಕ್ಕು ನಾಶವಾಗುವ ಘಟನೆ. ಮಕ್ಕಳಿಗೆ ಉಂಟಾದ ಈ ಸಾಮೂಹಿಕ ಸರ್ವನಾಶವೇ ಒಂದು ರೂಪಕವಾಗಿ ಆಕಾರಪಡೆದು 'ಪೈಡ್ ಪೈಪರ್' ಕವಿತೆಗೆ ಕಾರಣವಾಗಿರುವುದು ಎದೆ ಝಲ್ಲೆನ್ನಿಸುವಂಥ ವಿಷಯ. ಈ ಹಿನ್ನೆಲೆಯಲ್ಲಿ ಬ್ರೌನಿಂಗ್ ಕವಿತೆಯನ್ನ, ಅಥವಾ ಕುವೆಂಪು ಅವರ ಕಿಂದರಿಜೋಗಿ ಪದ್ಯವನ್ನ ಇನ್ನೊಮ್ಮೆ ಓದಿದರೆ, ಆ ಕವಿತೆ ಮಕ್ಕಳಿಗೆ ಮಾತ್ರವಲ್ಲ, ಹಿರಿಯರಿಗೂ ಬೇರೊಂದು ನೆಲೆಯಲ್ಲಿ ದಕ್ಕುವ ಕವಿತೆಯಾಗುತ್ತದೆ.

ಎಲ್ಲ ಮಕ್ಕಳ ಕವಿತೆಗಳು ಹೀಗಿರಬೇಕೆಂಬುದು ನನ್ನ ವಾದವಲ್ಲ. ಆದರೆ ಮಕ್ಕಳ ಕವಿತೆಗಳು ಹೀಗೆ ಬದುಕಿನ ದಾರುಣತೆಯನ್ನು ಹೃದಯದಲ್ಲಿ ಬಚ್ಚಿಟ್ಟುಕೊಂಡು ಮಕ್ಕಳ ಮನಸ್ಸನ್ನು ಪ್ರವೇಶಿಸಿದರೆ, ಇತಿಹಾಸದ ಕ್ರೌರ್ಯವನ್ನೂ ಮಾಯಾರೂಪದಲ್ಲಿ ನಾವು ಮಕ್ಕಳಿಗೆ ದಾಟಿಸಿದ ಹಾಗೆ ಆಗುತ್ತದೆ.